JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಸಮುದಾಯದ ಬದುಕಲ್ಲಿ ಜನಪದ ಸಾಹಿತ್ಯದ ಮೌಲ್ಯಗಳ ಪ್ರಸ್ತುತತೆ

**ಶಿವರಾಜಕುಮಾರ ಕಲ್ಲಿಗನೂರ ಬೋಧಕ ಸಹಾಯಕರು ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಣ, ಮಹಾವಿದ್ಯಾಲಯ, ಧಾರವಾಡ**

**ಅಮೂರ್ತ**

ಜನಪದ ಜೀವನ ಮೌಲ್ಯಗಳು ಇಂದು ಪ್ರಸ್ತುತ ಎಂದು ಹೇಳುತ್ತಾ ಜೀವನ ಮೌಲ್ಯಗಳು ಹಿಂದಿನ ಆಶಯಗಳನ್ನು ಗಮನಿಸಿ ಅವರ ಜೀವನ ಪ್ರೀತಿ, ಸ್ವಾಭಿಮಾನ, ಸತ್ಯನಿಷ್ಠೆ, ಶ್ರದ್ದೆಯ ದುಡಿಮೆ, ಸಮಸ್ಟಿ ಪ್ರಜ್ಞೆ, ಸಹಕಾರ, ಮನೋಭಾವ, ಸಹಿಷ್ಣುತೆ, ಸಹ ಬಾಳ್ವೆ, ಸಾಂಸ್ಕೃತಿಕ ಅರಿವು, ಬದುಕುವ ಕೌಶಲ್ಯ, ಮೊದಲಾದವುಗಳು ಅನುಕರಣೆಯಾಗಿವೆ. ಇವೆಲ್ಲವುಗಳನ್ನು ನಾವೆಲ್ಲರೂ ಬದುಕಿನಲ್ಲಿ ಅಳವಡಿಸಿಕೊಂಡು ಜೀವನ ಸಾಗಿಸಿದರೆ ಮೌಲ್ಯಗಳಿಗೆ ಒಂದು ಅರ್ಥ ಬರುವುದರಲ್ಲಿ ಎರಡು ಮಾತಿಲ್ಲ ಎಂದು ತಿಳಿಯಲಾಗುತ್ತದೆ.

**ಪ್ರಮುಖ ಪದಗಳು: ಜನಪದ ಸಾಹಿತ್ಯ, ಮೌಲ್ಯ**

**ಪೀಠಿಕೆ**

ಜನಪದ ಸಾಹಿತ್ಯ ಜನಸಾಮಾನ್ಯರ ಸಾಹಿತ್ಯ, ನಿತ್ಯದ ಬದುಕಿನೊಂದಿಗಿನ ಮುಖಾಮುಖಿ ಸಂವಾದ. ಅದು ಜನಪದ ಜೀವನಾನುಭವಗಳ ಜೀವಕೋಶ, ಮೈಮನಗಳ ದಣಿವು ಕಳೆಯಲು, ಬದುಕಿಗೆ ಉತ್ಸಾಹ ತುಂಬಲು, ಕಷ್ಟ–ಸುಖ; ಒಲವು–ನಿಲುವು; ವೇದನೆ–ಸಂವೇದನೆಗಳನ್ನು ಹಂಚಿಕೊಳ್ಳಲು ಅವರಾಡಿದ, ಹಾಡಿದ ಕಲಾತ್ಮಕ ಅಭಿವ್ಯಕ್ತಿಗಳು ಸಾಹಿತ್ಯದ ಸ್ವರೂಪ ಪಡೆದುಕೊಂಡವು. ಮಹರ್ಷಿ ವಾಲ್ಮೀಕಿಯ ಬಾಯಿಯಿಂದ ಹೊರಹೊಮ್ಮಿದ ರಾಮಾಯಣದ ಮೊದಲ ಶ್ಲೋಕದಂತೆ ಅವರಿಗರಿವಿಲ್ಲದೆ ಮೂಡಿ ಬಂದ ಸಾಹಿತ್ಯವಿದು. ತಾವಾಡಿದ ಮಾತು, ಹಾಡಿದ ಹಾಡು ತಮಗೆ ಮುದನಿಡಿದಾಗ ನೆನಪಿಟ್ಟುಕೊಂಡು ಮತ್ತೆ ಮತ್ತೆ ಆಡಿ, ಹಾಡಿ ಇತರರಿಗೂ ಮುದನೀಡಿ, ಅವುಗಳನ್ನು ಹಂಚಿಕೊಂಡು ಸಂತೋಷ ಪಟ್ಟರು. ಕೊರಳಿನಿಂದ ಕೊರಳಿಗೆ ತಲೆತಲಾಂತರಗಳಿಂದ ಹರಿದು ಬಂದ ಜನಪದ ಸಾಹಿತ್ಯ ಜೀವನಾನುಭವಗಳ ಬಹುದೊಡ್ಡ ಕಣಜ. ದುಡಿಯುವ ಜನರಿಗೆ ಜೀವನವೇ ಮುಖ್ಯ. ಯಾರು ಬಂದರೂ ರಾಗಿ ಬೀಸುವುದು ತಪ್ಪುವುದಿಲ್ಲ. ತಮ್ಮ ಅನ್ನವನ್ನು ತಾವೇ ಅರ್ಜಿಸಿಕೊಳ್ಳುವ ದುಡಿಯುವ ವರ್ಗಕ್ಕೆ ರಾಜರು, ಅಧಿಕಾರಿಗಳು, ಶ್ರೀಮಂತ–ಸಾಮಂತರು ಮುಖ್ಯರಾಗುವುದಿಲ್ಲ. ದಿನನಿತ್ಯ ತಮ್ಮೊಂದಿಗೆ ಒಡನಾಡುವ ಜನರೆ ಅವರ ಆಪ್ತರು. ವಾಸಿಸುವ ಸಮಾಜವೇ ದೈವ. ನಂಬಿಗೆಯೇ ದೇವರು, ಕುಟುಂಬವೇ

ಸಾಮ್ರಾಜ್ಯ. ಸಾಮಾಜಿಕ ವ್ಯವಸ್ಥೆಗನುಗುಣವಾಗಿ ಬಾಳಿ ಬದುಕುವುದೆ ಅವರ ಜೀವನಧರ್ಮ. ಸರಳ, ಸುಂದರ, ಸಂತೃಪ್ತಿಯ ಬದುಕು ಕಟ್ಟಿಕೊಂಡು ಸಮಾಜದೊಂದಿಗೆ ಹೊಂದಿಕೊಂಡು ಬದುಕಲು ಯತ್ನಿಸಿದರು.

ಸಾಮಾಜಿಕ ರೀತಿ–ನೀತಿಗಳ ನೆಲೆಯಲ್ಲಿ ರೂಪಗೊಂಡ ಜೀವನ ಮೌಲ್ಯಗಳನ್ನು ಅಳವಡಿಸಿಕೊಂಡರು. ಮೌಖಿಕ ಸಾಹಿತ್ಯದ ಮೂಲಕ ಆ ಜೀವನ–ಮೌಲ್ಯಗಳು ಪ್ರಸಾರಗೊಂಡು ಸಮಷ್ಟಿ ಹಿತವನ್ನು ಕಾಪಾಡಿದವು. ಜೀವನ ಮೌಲ್ಯಗಳಲ್ಲಿ ಸಮಕಾಲೀನ ಮತ್ತು ಸಾರ್ವಕಾಲಿಕ ಎಂಬೆರಡು ವಿಧಗಳು. ಸಮಕಾಲೀನ ಜೀವನ ಮೌಲ್ಯಗಳು ಕಾಲಕಾಲಕ್ಕೆ ಬದಲಾಗುತ್ತವೆ. ಸಾರ್ವಕಾಲಿಕ ಜೀವನ ಮೌಲ್ಯಗಳು ಮನುಕುಲದ ಆದರ್ಶಗಳಾಗುತ್ತವೆ. ಜನಪದರ ಸಮಕಾಲೀನ ಜೀವನ ಮೌಲ್ಯಗಳು ನಮಗಿಂದು ಪ್ರಸ್ತುತವಾಗುವುದಿಲ್ಲ ನಿಜ, ಆದರೆ ಆ ಮೌಲ್ಯಗಳ ಹಿಂದಿನ ಆಶಯಗಳನ್ನು ಅರಿತುಕೊಂಡು ಜೀವನ ರೂಪಿಸಿಕೊಳ್ಳಲು ಸಹಾಯ ಮಾಡುತ್ತವೆ. ಸಾರ್ವಕಾಲಿಕ ಮೌಲ್ಯಗಳು ಇಂದಿಗೂ ಎಂದೆಂದಿಗೂ ಪ್ರಸ್ತುತವಾಗುತ್ತವೆ. ಜನಪದ ಸಾಹಿತ್ಯದಲ್ಲಿ ಪ್ರತಿಪಾದಿತಗೊಂಡ ಜನಪದ ಜೀವನ ಮೌಲ್ಯಗಳು ನಮ್ಮೆಲ್ಲರಿಗೂ ಆದರ್ಶಪ್ರಾಯವಾಗಿವೆ.

ಮೌಲ್ಯಗಳು ಮಾನವನ ಬದುಕು ಹಸನಾಗಲು ತಕ್ಕುದಾಗಿರಬೇಕು, ತನ್ನ ಹಾಗೂ ಪರರ ಬದುಕು ಸುಖಕರವಾಗಿರಬೇಕು ಎಂಬುದೆ ಮೌಲ್ಯದ ಅಭೀಪ್ಸೆ ಸ್ವಾರ್ಥಕ್ಕಿಂತ ಪರಾರ್ಥ ಮುಖ್ಯವೆಂಬುದನ್ನ ಪ್ರಾಚೀನ ಭಾರತೀಯ ಪರಂಪರೆ ಸಾರಿ ಹೇಳಿದೆ. ಇಂದು ಐಹಿಕ ಸುಖಭೋಗಗಳಿಗಾಗಿ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರಭಾವದಿಂದ ಜನರಲ್ಲಿನ ಮಾನವೀಯ ಮೌಲ್ಯಗಳು ಕಡಿಮೆಯಾಗುತ್ತಿವೆ.

ವ್ಯಕ್ತಿ ಇಂದು ಸ್ವಾರ್ಥ ಸಾಧನೆಗಾಗಿ ಎಂಥ ಹೀನಕೃತ್ಯಕ್ಕೂ ಇಳಿಯಲು ಸಿದ್ದನಾಗಿದ್ದಾನೆ. ಹಣ ಗಳಿಸಲು ಹಾಗೂ ವಸ್ತುಗಳನ್ನು ಪಡೆಯಲು ತನ್ನ ಎಲ್ಲಾ ಮೌಲ್ಯಗಳನ್ನು ಗಾಳಿಗೆ ತೂರಿಬಿಡುತ್ತಿದ್ದಾನೆ. ಇಂದಿನ ಶಿಕ್ಷಣ ಪದ್ದತಿ ಹಾಗೂ ಸಮೂಹ ಮಾದ್ಯಮಗಳು ಮಾಹಿತಿ ನೀಡುವ ಕೇಂದ್ರಗಳಾಗಿವೆ ಹಾಗೂ ವೃತ್ತಿಗೆ ಸಿದ್ದಗೊಳಿಸುವ ತರಬೇತಿ ಕೇಂದ್ರಗಳಾಗಿವೆ. ಮಾನವನಿಗೆ ನಿಜವಾಗಿ ಸಿಗಬೇಕಾದ ಶಾಂತಿ ಹಾಗೂ ಆನಂದ ನೀಡುವ ಮೌಲ್ಯಗಳ ಕೊರತೆ ಕಂಡು ಬರುತ್ತಿದೆ. ಇಂದು ವ್ಯಕ್ತಿ ಸಾದನೆಗಿಂತ ಮುಖ್ಯವಾಗಿ ಮೌಲ್ಯಾಧಾರಿತ ಶಿಕ್ಷಣದ ಅವಶ್ಯಕತೆಯಿದೆ. ಶಿಕ್ಷಣದ ಅಂತಿಮಗುರಿ ಉತ್ತಮ ಮೌಲ್ಯಗಳ ಮೂಲಕ ಉತ್ತಮ ಜೀವನ ಕೌಶಲ್ಯಗಳ ಅರಿವು ಮೂಡಿಸುವ ಧೋರಣೆ ಹೊಂದಿದೆ. ಜನಪದ ಸಾಹಿತ್ಯ ಜೀವನ ಮೌಲ್ಯಗಳ ಅಕ್ಷಯ ಭಂಡಾರ.

ಬದುಕಿಗೆ ಆಕಾರ ನೀಡುವ ಮಾಂತ್ರಿಕ ಶಕ್ತಿ. ಲಾಲಿ ಹಾಡುಗಳಿಂದ ಮೊದಲ್ಗೊಂಡು ಅನುಭಾವ ಪದಗಳವರೆಗೆ ಜೀವನ ಮೌಲ್ಯಗಳ ಸಾಲುದೀಪಗಳು ನಮ್ಮ ಲೆಕ್ಕಕ್ಕೆ ನಿಲುಕವು. ಜನಪದ ಸಾಹಿತ್ಯಜೀವನ ಪಠ್ಯ ಶಿಕ್ಷಣಕ್ಕೆ ಪ್ರತ್ಯೇಕ ವ್ಯವಸ್ಥೆಯಿಲ್ಲದ ಆ ಕಾಲದಲ್ಲಿ ಈ ಮೌಖಿಕ ಪಠ್ಯಗಳೇ ಪಾಠಗಳು, ಅವ್ವ, ಅಕ್ಕ, ತಂಗಿ, ತಮ್ಮ, ಅಣ್ಣ, ಅಪ್ಪ, ಅಜ್ಜ, ಅಜ್ಜಿ, ಗೆಳೆಯ, ಗೆಳತಿ, ಹೆಂಡತಿ, ಅತ್ತೆ, ಮಾವ ನೆರೆಹೊರೆಯವರು, ಹಿರಿಯರು ಹೀಗೆ ಯಾರ್‍ಯಾರೋ ವಿವಿಧ ಮತ್ತು ವಿಭಿನ್ನ ಪ್ರಸಂಗಗಳಲ್ಲಿ ವ್ಯಕ್ತಿಯೊಬ್ಬನ ಬದುಕಿಗೆ ಮೌಲ್ಯಗಳನ್ನು ತುಂಬುತ್ತ ವ್ಯಕ್ತಿ ಜೀವನದ ಸಾರ್ಥಕತೆಗೆ ಹರಸುತ್ತಿದ್ದರು. ಈಮೌಲ್ಯಗಳನ್ನು ಸ್ಥೂಲವಾಗಿ ಐದು ಗುಂಪುಗಳಲ್ಲಿ ವಿಭಾಗಿಸಬಹುದು.

**ವ್ಯಕ್ತಿನಿಷ್ಠ ಜೀವನ ಮೌಲ್ಯಗಳು**

ಸಾವಿರ ವರ್ಷ ಕಲಿತರೂ ಸಾಲಿ ಮುಗಿದಿಲ್ಲ, ಸಾಯುವವರೆಗೂ ಕಲಿತರೂ ಸಾಲಿ ಮುಗಿದಿಲ್ಲ' ಎಂಬಂತ ಮಾತುಗಳು ಈಗಲೂ ಪ್ರಚಲಿತದಲ್ಲಿವೆ. ವಿದ್ಯೆಗೆ ಕೊನೆಯಿಲ್ಲ ಒಬ್ಬ ವ್ಯಕ್ತಿಯಲ್ಲಿ ಸಮಾಜನಿರಂತರವಾಗಿ ಮೌಲ್ಯಗಳನ್ನು ಪೂರಣಮಾಡುತ್ತಿರುತ್ತದೆ. ಜೀವನವೇ ಶಿಕ್ಷಣ; ಶಿಕ್ಷಣವೇ ಜೀವನ, ಜೀವನ– ಶಿಕ್ಷಣಗಳ ಸಂಬಂಧ ಅವಿನಾಭಾವವಾದುದು.

ಆಚಾರಕ್ಕರಸಾಗು ನೀತಿಗೆ ಪ್ರಭುವಾಗು

ಮಾತಿನಲ್ಲಿ ಚೂಡಾಮಣಿಯಾಗು / ನನ ಕಂದ

ಜ್ಯೋತಿಯೇ ಆಗು ಜಗಕ್ಕೆಲ್ಲ

ಪ್ರತಿಯೊಬ್ಬ ತಾಯಿ ತನ್ನ ಕಂದ ಆದರ್ಶ ವ್ಯಕ್ತಿಯಾಗಬೇಕೆಂದು ಬಯಸುತ್ತಾಳೆ. ತೊಟ್ಟಿಲು ತೂಗುತ್ತಲೆ ತನ್ನ ಕನಸನ್ನು ಕನವರಿಸುತ್ತ ಜನಿಸಿದ ಮಕ್ಕಳೆಲ್ಲ ಜಗವನ್ನು ಬೆಳಗುವ ಜ್ಯೋತಿಗಳಾಬೇಕೆಂಬುದು ಮಾತೃತ್ವದ ಮಹದಾಸೆ ಹೀಗೆ ಬೆಳೆಯುವ ಸಿರಿಯಲ್ಲಿ ವ್ಯಕ್ತಿನಿಷ್ಠಮೌಲ್ಯಗಳನ್ನು ತಾಯಿ ಬಾಲ್ಯದಲ್ಲಿಯೆ ತುಂಬುತ್ತಾಳೆ.

ಜನಪದ ದೈವಗಳಿಗೂ ಅಂಬಲಿಯೇ ಸಾಕು. ನಮ್ಮ ಅಗತ್ಯಗಳು ಕನಿಷ್ಠವಾದಷ್ಟು ನೆಮ್ಮದಿ ಜಾಸ್ತಿ. ಅತಿ ಜಗ್ಗಿದರೆ ಹಗ್ಗ ಹರಿಯುತ್ತದೆ. ಮಿತಿಯಲ್ಲಿ ಬದುಕಿದರೆ ಸ್ವರ್ಗಸುಖ. ಸಮಸ್ಯೆಗೆ ಸಾವು ಪರಿಹಾರವಲ್ಲ ಸಕಾರಾತ್ಮಕ ಚಿಂತನೆ ಎಂಥ ಸಮಸ್ಯೆಗೂ ಪರಿಹಾರಸೂಚಿಸುತ್ತದೆ. ಮರ್ತ್ಯಕ ಹುಟ್ಟಿ ಬಂದ ಜೀವ ವ್ಯರ್ಥವಾಗಬಾರದು, ಮನೆ ತುಂಬ ಮಕ್ಕಳು, ದುಡಿಯುವವಳು ಒಬ್ಬಳೇ, ಕಾಳು, ಕೊಟ್ಟರೆ ನುಚ್ಚಂಬಲಿ ಮಾಡಿ ಸಲುಹುವೆನೆಂದು ಶಿವನಲ್ಲಿ ಪ್ರಾರ್ಥಿಸುತ್ತಾಳೆ.

ಬಡತನ ನನಗಿರಲಿ ಭಾಳ ಮಕ್ಕಳಿರಲಿ

ಮ್ಯಾಗ ಗುರುವಿನ ದಯವಿರಲಿ/ ನನ ಗುರುವೆ

ಬಡತನದ ಚಿಂತಿ ನಿನಗಿರಲಿ

ಬಡತನದ ಚಿಂತೆಯನ್ನು ಗುರುವಿಗೆ ಕೊಟ್ಟು ಮಕ್ಕಳೊಂದಿಗೆ ಬದುಕು ಮಾಡುವುದು ಜನಪದರ ಆದರ್ಶ.

**ಕೌಟುಂಬಿಕ ಜೀವನ ಮೌಲ್ಯಗಳು**

ಜನನಿತಾನೆ ಮೊದಲ ಗುರು ಎಂಬಂತೆ ಕೌಟುಂಬಿಕ ಮುಖ್ಯಸ್ಥೆಯಾಗಿರುತ್ತಾಳೆ. ಅವಳ ಪ್ರತಿ ಪದಗಳು ತನ್ನ ಕುಟುಂಬವನ್ನು ಸಮಾಜದ ಸರಿಕರೆದರು ಸಮ ನಿಲ್ಲುವಂತೆ ಮಾಡುವ ದೋರಣೆಯನ್ನು ಹೊಂದಿರುತ್ತಾಳೆ, ಅವಳ ಮೂಲ ಗುರಿ ಕುಟುಂಬ ನಿರ್ವಹಣೆ ಜೊತೆಗೆ ಸ್ಥಿತ್ಯಂತರ ಕಾಯ್ದುಕೊಳ್ಳುವುದಾಗಿದೆ.

ಮಂದಿಮಕ್ಕಳೊಳಗ ಛಂದಾಗ್ಹೊಂದಿರಬೇಕ

ನಂದೀಯ ಶಿವನ ದಯದಿಂದ / ಹೋಗಾಗ

ಮಂದಿ ಬಾಯಾಗ ಇರಬೇಕ//

ಈ ಪುಟ್ಟ ತ್ರಿಪದಿ ಜನಪದರ ಜೀವನ ದರ್ಶನದ ಉತ್ಕೃಷ್ಟ ಅಭಿವ್ಯಕ್ತಿ. ಅತ್ಯಂತ ಸರಳವಾಗಿ, ಸಹಜವಾಗಿ, ಸುಂದರವಾಗಿ ಮಾನವ ಜೀವನದ ಸಾರ್ಥಕತೆಯನ್ನು ನಿವೇದಿಸುತ್ತದೆ. ಜನಪದರ ದೃಷ್ಟಿಯಲ್ಲಿ ಸಹಬಾಳ್ವೆಗಿಂತ ಮಿಗಿಲಾದ ಜೀವನಮೌಲ್ಯ ಮತ್ತೊಂದಿಲ್ಲ. ಮಂದಿ– ಮಕ್ಕಳೊಳಗೆ ಛಂದದಿಂದ ಹೊಂದಿಕೊಂಡಿರಬೇಕು; ಮಂದಿ– ಮಕ್ಕಳು' ಎಂದರೆ ಹಿರಿಯರು–ಕಿರಿಯರು; ಹೊರಗಿನವರು ಒಳಗಿನವರು; ಸಮಾಜ–ಕುಟುಂಬ ಮುಂತಾದ ಅರ್ಥಗಳು. ಛಂದ' ಎಂದರೆ ಸುಂದರ. ಒಳ–ಹೊರಗಿನ ಬದುಕು ಸುಂದರವಾಗಿರಬೇಕು.

ಮನಸ್ಸಿನ ವೈಶಾಲ್ಯ ಮತ್ತು ಹೃದಯದ ಔದಾರ್ಯ ಬದುಕನ್ನು ಸುಂದರಗೊಳಿಸುತ್ತವೆ. ಎಲ್ಲರಿಂದ ಹೌದು' ಎನಿಸಿಕೊಂಡು ಜೀವಿಸುವುದೇ ಬದುಕು; 'ಅಲ್ಲ' ಎನಿಸಿಕೊಂಡು ಬದುಕುವುದಕ್ಕಿಂತ ಈ ಕ್ಷಣವೇ ಸಾವುದು ಲೇಸು' ಎಂದು ಮಹಾದೇವಿಯಕ್ಕ ಹೇಳಿದರೆ ಲೇಸೆನಿಕೊಂಡು ಒಂದು ದಿನ ಬದುಕಿದರೂ ಸಾಕೆನ್ನುತ್ತಾರೆ ಬಸವಣ್ಣನವರು. ಕನ್ನಡ ಸಂಸ್ಕೃತಿಯೆಂದರೆ ಕುಟುಂಬಗಳ ರೀತಿ ನೀತಿಗಳ ಸಂವಿಧಾನ ಒಂದು ಉದಾತ್ತ ಮಟ್ಟದ ಸಂಸ್ಕೃತಿಯ ಕುರುಹು ಆಗಬೇಕಾದರೆ ಆ ಸಮಾಜದ ಕೌಟುಂಬಿಕ ಜೀವನ ಸಮೃದ್ಧವಾಗಿರಬೇಕಾಗುತ್ತದೆ, ಸಂಪನ್ನವಾಗಿರಬೇಕಾಗುತ್ತದೆ.

ತಂದೆ–ತಾಯಿ ನನ್ನ ಮಾವರು ಬಂಗಾರ

ಮೇಲಗಿರಿ ನನ್ನ ವಗೆತನ/ಇದ್ದರ

ಬಂಗಾರಾದೇನ ಬಳಗಕ

ಜನಪದರ ಬದುಕು ವಿಶೇಷವಾಗಿ ಕುಟುಂಬದ ಬದುಕು, ತುಂಬ ರಸವತ್ತಾದುದ್ದು ಒಲುಮೆ ಚೆಲುವಿನಿಂದ ಪೋಷಿತವಾದುದ್ದು. ನಮ್ಮ ಗರತಿಯರ ಹಾಡು ಪಾಡುಗಳು ಜನಪದ ಸಂಸ್ಕೃತಿಯ ಕೋಶಗಳಾಗಿದ್ದು, ಕೌಟುಂಬಿಕ ಜೀವನ ಮೌಲ್ಯಗಳನ್ನು ರೂಪಿಸುವುದರ ಮೂಲಕ ಸಮುದಾಯದ ಬದುಕಿನ ಸಂಹಿತೆಗೆ ನಾಂದಿ ಹಾಡಿದರು. ಆ ಮೌಲ್ಯಗಳನ್ನು ಬದುಕಿ ತೋರಿಸುವಲ್ಲಿ ಗರತಿಯರು ತಮ್ಮ ಹಾಡುಗಳಲ್ಲಿ ಅವಿಭಕ್ತ ಪ್ರಜ್ಞೆಯ ಅಭಿವ್ಯಕಿ್ತ ಸೂರೆಗೊಂಡಿದೆ ಗರತಿ' ಕೇಂದ್ರಿತ ಕೌಟುಂಬಿಕ ಸಂಬಂಧಗಳೆಲ್ಲವೂ ಅಲ್ಲಿ ಚಿತ್ರಿತಗೊಂಡಿವೆ. ಅತ್ತೆ–ಮಾವ, ಗಂಡ, ಮೈದುನ, ನಾದಿನಿ, ನೆಗೆಣ್ಣಿ, ಮಕ್ಕಳು, ತವರಿನಲ್ಲಿಯ ತಾಯಿ–ತಂದೆ, ಸಹೋದರರು, ಅತ್ತಿಗೆ; ಬಳಗದಲ್ಲಿ ಸೋದರ ಮಾವ ಮುಂತಾದವರ ವರ್ಣಚಿತ್ರಗಳು ಸಾಲು ಸಾಲಾಗಿ ಪ್ರದರ್ಶಿತಗೊಂಡಿವೆ.

**ಸಾಮಾಜಿಕ ಜೀವನ ಮೌಲ್ಯಗಳು**

ಜನಪದರ ಜೀವನದಂತೆ ಅವರ ಆಚಾರ– ವಿಚಾರಗಳು ಕೂಡ ಸರಳವಾದವು. ಅಂತ್ಯ ಯಾತ್ರೆಯಲ್ಲಿ ಬಂಧು–ಬಳಗದವರೆಲ್ಲರೂ ಪಾಲ್ಗೊಂಡು, ಅತ್ತು–ಕರೆದು ಮಣ್ಣು ಮಾಡಬೇಕೆಂಬುದು ಅವರ ಅಂತಿಮ ಆಸೆ. ಮದುವೆಯಲ್ಲಿ ಜನ ಸೇರುವುದು ಮುಖ್ಯವಲ್ಲ; ಅಂತಿಮಯಾತ್ರೆಗೆ ಜನ ಬರಬೇಕು. ಅದು ಅವನ ಬದುಕಿಗೆ ಸಂದಾಯವಾಗುವ ಸಮಾಜದ ಅಂತಿಮ ಗೌರವ, ಬದುಕಿದ್ದಾಗ ಜನರ ಕಣ್ಣಲ್ಲಿದ್ದ ವ್ಯಕ್ತಿ ಸತ್ತಾಗ ಜನರ ಬಾಯಲ್ಲಿ ಇರುವುದಿಲ್ಲ.

ಹುಟ್ಟಾಗ ತರಲಿಲ್ಲ ಹೋಗಾಗ ಒಯ್ಯುದಿಲ್ಲ

ಸುಟ್ಟು ಸುಟ್ಟು ಸುಣ್ಣದ್ಹರಳಾಯ್ತು / ದೇಹವು

ಕಷ್ಟವ ಬಿಡಿಸೋ ಮಹಾದೇವ

ದುಡಿಮೆಯೇ ಜೀವನ. ದುಡಿದು, ದುಡಿದು ಸುಣ್ಣದ ಕಲ್ಲಿನಂತೆ ಸುಟ್ಟು ಅರಳುವ ನಿತ್ಯದ ಕಷ್ಟದಿಂದ ಬಿಡುಗಡೆಗೊಳಿಸುವ ಸಾವಿನ ಬಗ್ಗೆ ಜನಪದರಿಗೆ ಭಯವೂ ಇಲ್ಲ. ಬದುಕಿನ ಕಷ್ಟಗಳಿಂದ ಮುಕ್ತಗೊಳಿಸುವ ಸಾವು ಶಿವನ ದಯೆಯೆಂದು ಹೇಳುವಲ್ಲಿ ಅವರ ಜೀವನ ಸಂವೇದನೆಯ ನೋವಿನ ತಂತಿ ಮಿಡಿಯುತ್ತದೆ. ಇವು ಜನಪದರ ಜೀವನಾದರ್ಶಗಳು ಹಾಗೇಯೆ ಜೀವಂತ ಇದ್ದಾಗ ಸಮಾಜಕ್ಕೆ ಒಳಿತಾಗುವ ಕಾರ್ಯವೆಸಗಬೇಕೆನ್ನುವುದ ಜನಪದರ ಆಶಯವಾಗಿತ್ತು.

ಮನುಷ್ಯ ಸಮಾಜ ಜೀವಿ ಸಾಮಾಜಿಕವಾದ ಮೌಲ್ಯಗಳನ್ನು ತಿಳಿಸಲು ಹಾಗೂ ಸಮಾಜವನ್ನು ಸೌಹಾರ್ದಯತವಾಗಿಡಲು ದಾನದ ಕಲ್ಪನೆಯನ್ನು ಜನಪದರು ಅತ್ಯಂತ ಸುಂದರವಾಗಿ ತಿಳಿಸಿದ್ದಾರೆ. ಅನ್ನದಾನಕ್ಕಿಂತ ಇನ್ನೂ ದಾನಗಳಿಲ್ಲ. ಅನ್ನದಾನ ಜೀವದಾನ, ಅನ್ನದಾನದ ಪುಣ್ಯ ಎಂದೂ ಕೈಬಿಡುವುದಿಲ್ಲವೆಂಬ ಗಟ್ಟಿ ನಂಬಿಕೆಗಳ ನಡುವೆ ಬದುಕುತ್ತಿದ್ದ ಅವರು ಮನೆಗೆ ಬಂದವರೆಗೆಲ್ಲ ಅಂಬಲಿ ಮಜ್ಜಿಗೆ ಕುಡಿಯಲು ಕೊಡುತ್ತಿದ್ದರು. ಅನ್ನ ಕಾಣದವರು ಬನ್ನಿ ನನ್ನ ಊರ ಮೇಲೆ ಬೆನ್ನಿಗೆ ಮೂರು ಮುದ್ದೆ ಹೊರೆಸಿಕೊಟ್ಟೇನು ಎನ್ನುತ್ತಿದ್ದರು.

ದಾನ ಮಾಡಲು ಜನಕೆ ಹಾನಿಯಾಗುವುದುಂಟೆ

ಮೀನವೆದುರಿಸಿ ಸೋತಂತೆ /ಮಾನವನು

ಹೀನಾಗಿ ಅರಿತು ಸತ್ತಂತೆ

ದಾನ ಮಾಡದ ಮಾನವನು ಇದ್ದೂ ಸತ್ತಂತೆ. ಕವಣೆಗಲ್ಲಿನಂತೆ ಗೊತ್ತಿಲ್ಲದಂತೆ, ಒಂದು ದಿನ ಜಾರಿ ಹೋಗುವ ಜೀವ ಶಿವಕೊಟ್ಟ ಕಾಲಕ್ಕೆ ಹಂಚಿಕೊಂಡು ಉಣಬೇಕು. ಸತ್ತರೆ ಗೋರಿಯ ಸುತ್ತ ನವಣೆ ಬಿತ್ತುವರೆಂಬ ಅರಿವಿರಬೇಕು ಎಂದು ತಿಳಿಸಿದವರು ಜನಪದರು.

**ಸಾಂಸ್ಕೃತಿಕ ಜೀವನ ಮೌಲ್ಯಗಳು**

ಬದುಕು ಯಾಂತ್ರಿಕವಾದರೆ ಅದರಲ್ಲಿ ಸಾರಾಂಶವಿರುವುದಿಲ್ಲ. ಹಬ್ಬದೂಟವನ್ನು ಸವಿಯುವಂತೆ ಬದುಕನ್ನು ಆಸ್ವಾದಿಸಬೇಕೆನ್ನುವದು ಜನಪದರ ಅಭಿಮತ. ಅವರಿಗೆ ಸಂಪತ್ತಿಗಿಂತಲೂ ಸಂತೃಪ್ತಿ ಬೇಕಿತ್ತು, ಜೀವನದ ಎಲ್ಲಾ ಕ್ಷಣಗಳನ್ನು ಸಂತೋಷದಿಂದ ಅನುಭವಿಸುವ ಹಂಬಲ ಅವರದು, ಹುಟ್ಟಿದ ಐದನೇ ದಿನದಂದು ಐದೇಸಿ, ಹನ್ನೇರಡು ಅಥವಾ ಹದಿಮೂರನೇ ದಿನಕ್ಕೆ ನಾಮಕರಣ ಸಮಾರಂಭಕ್ಕೆ ಅತ್ತೆ ಬಂದು ಹೆಸರಿಡಬೇಕು ಮಗುವನ್ನು ತೊಟ್ಟಿಲಿಗೆ ಹಾಕಿ ಜೋಗುಳ ಹಾಡಬೇಕು.

ಬಂಗಾರ ತೊಟ್ಟಿಲ ದೊರಿತಾಯಿ ಕುಂದಲ
ಸಿಂಗಾರದ ಶ್ರೀ ಕೃಷ್ಣಗ ಥಂದಾಗಿ ತೂಗಾರಿ / ಜೋ ಜೋ
ಕರೆದು ಬಂದೆವು ಓಣಿ ನೆರೆದು ಬಂದಿತು ಮಂದಿ
ಬಂದು ನಿಂತಾರವ್ವ ಕನ್ನಿ ಮುತ್ತೈದ್ಯಾರು / ಜೋ ಜೋ

ಹುಟ್ಟಿನಿಂದ ಸಾಯುವವರೆಗಿನ ಅಗಣಿತ ವ್ಯಕ್ತಿಗತ ಸಮಾರಂಭಗಳು. ಈ ಸಮಾರಂಭಗಳು ಬದುಕನ್ನು ಸಂಭ್ರಮಿಸುವ ಸಂಥರ್ಭಗಳು ಪ್ರತಿಯೊಂದು ಸಮಾರಂಭದಲ್ಲಿಯೂ ಹಾಡು, ನೃತ್ಯ, ವಾದ್ಯಮೇಳ, ಬಳಗದವರೆಲ್ಲ ಸೆರುವುದು ಹೊಸ ಬಟ್ಟೆ ಧರಿಸುವುದು ಕೂಡಿ ಉಂಡು ನಲಿಯುವುದು ಉಡುಗೊರೆ ಹಂಚಿಕೊಳ್ಳುವುದು ಪರಸ್ಪರ ಕ್ಷೇಮ ಸಮಾಚಾರ ವಿಚಾರಿಸುವುದು ಜೀವನದ ಸಾಂಸ್ಕೃತಿಕ ಮೌಲ್ಯಗಳಲ್ಲಿ ಒಂದಾಗಿವೆ.

ಸಂಸ್ಕೃತಿ ಪದವು ಸಮಷ್ಟಿ ಜೀವನದ ಅಂತರಂಗದ ಸಾಧನೆಗೆ ಸಹಕಾರಿಯಾದ ಸಾಮಗ್ರಿಗಳಿಂದ ಹಿಡಿದು ವ್ಯಷ್ಟಿ ಜೀವನದ ವಿಕಾಸಕ್ಕೆ ಕಾರಣವಾದ ಸಂಸ್ಕಾರದವರೆಗೆ ಈ ಪದದ ಅರ್ಥಬೆಳೆದಿದೆ.

ವ್ಯಕ್ತಿ ಕೇಂದ್ರಿತ ಸಾಮಾಜಿಕ ಮೌಲ್ಯಗಳು ಸಂಸ್ಕೃತಿಯ ಒಡಲ ಎಳೆಗಳೇ ಎಂಬುದನ್ನು ನೆನಪಿಸಿಕೊಳ್ಳಬೇಕು. ಜನಪದ ಸಂಸ್ಕೃತಿಯ ಒಡಲಲ್ಲಿಯೇ ಹಲವು ಸಂಸ್ಕೃತಿಗಳಿರುತ್ತವೆ. ಅದುಬಹುತ್ವದ ಸಂರಚನೆ ಆದರೆ ಒಟ್ಟಾರೆಯಾಗಿ ಗ್ರಹಿಸುವ ಪರಂಪರೆ ಬೆಳೆದು ಬಂದಿದೆ. ಈ ಚಿಂತನೆಯ ಹಿನ್ನೆಲೆಯಲ್ಲಿ ಜಾನಪದೀಯ ಸಾಂಸ್ಕೃತಿಕ ಮೌಲ್ಯಗಳನ್ನು ನೊಡಿದರೆ,

ಆ ರಾಜಾ ಈ ರಾಜಾ ಯಾ ರಾಜಾ ನಮಗಿಲ್ಲ
ರಾಜರ ರಾಜ ಮಳೆರಾಜ/ಬಂದರ
ರಾಜರ ಹಂಗು ನಮಗಿಲ್ಲ

ಪ್ರಕೃತಿಯ ಮುಂದೆ ಯಾರು ರಾಜ ಮಹಾರಾಜರಿಲ್ಲ ಪ್ರಕೃತಿಯೆ ಅಂತಿಮ ಸಂಸ್ಕೃತಿಯ ಪರಂಪರೆಗೆ ಪ್ರಕೃತಿಯೆ ಆಧಾರ ಹಾಗೂ ದೈವ ಅದಕ್ಕೆ ಸಾಂಸ್ಕೃತಿಕವಾಗಿ ಜಾನಪದರು ದೈವವೆಲ್ಲ ಪ್ರಕೃತಿಯೆಂದು ನಂಬಿ ಅದರ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ.

**ಆಧ್ಯಾತ್ಮಿಕ ಜೀವನ ಮೌಲ್ಯಗಳು**

ವಿಭಿನ್ನ ಧರ್ಮ, ಆಚರಣೆಗಳಿಂದ ಕೂಡಿದ ಜನಪದ ಸಮಾಜದಲ್ಲಿ ಒಂದು ಸಾಮಾನ್ಯ ಧಾರ್ಮಿಕತೆ ರೂಡಿ ಯಲ್ಲಿತ್ತು. ಲಿಂಗಾಯತ, ಜೈನ, ಮುಸ್ಲಿಂ ಇತ್ಯಾದಿ ಧರ್ಮಗಳು ಹುಟ್ಟಿಕೊಳ್ಳುವ ಮೊದಲು ಸಮಾಜದಲ್ಲಿ ಒಂದು ಸಾಮಾನ್ಯ ಧರ್ಮವಿತ್ತು. ಅದು ಜನಪದರ ಬಹುತ್ವ ಧರ್ಮ. ಅವರಿಗೆ ಆತ್ಮಕಲ್ಯಾಣದ ಧರ್ಮಕ್ಕಿಂತ ಜೀವನ ಕಲ್ಯಾಣದ ಧರ್ಮ ಬೇಕಿತ್ತು. ಅದಕ್ಕೆ ಬೆಳಗಿನ ಜಾವದಲ್ಲಿ ಏಳುತ್ತಿದ್ದಂತೆ ಅನ್ನ ನೀಡುವ ಭೂಮಿತಾಯಿಯನ್ನು ಮೊದಲು ನೆನಪಿಸಿಕೊಳ್ಳುತ್ತಿದ್ದರು.

ಬೆಳಗಾಗೆ ನಾನೆದ್ದು ಯ್ಯಾರ್ಯಾರ ನೆನೆಯಲೆ

ಎಳ್ಳು ಜೀರಿಗೆ ಬೆಳೆಯೊಳೆ/ ಭೂತಾಯಿ

ಎದ್ದೊಂದು ಗಳಿಗೆ ನೆನೆದೇನ

ಎಳ್ಳು ಜೀರಿಗೆ ಬೆಳೆಯುವ ಭೂಮಿತಾಯಿ ಅವರ ಪಾಲಿನ ಮಹಾದೈವ. ಮಣ್ಣನ್ನೆ ನೆಚ್ಚಿರುವ ಮಣ್ಣಿನ ಮಕ್ಕಳಿಗೆ, ಸತ್ತ ನಂತರ ತನ್ನೊಡಲೊಳಗೆ ಸೇರಿಸಿಕೊಳ್ಳುವ ಭೂತಾಯಿಯ ಬಗ್ಗೆ ಅಪಾರವಾದ ನಂಬಿಕೆಗಳು ಜನಪದರಲ್ಲಿವೆ ಹೀಗಾಗಿ ಆಧ್ಯಾತ್ಮೀಕತೆ ಎಂದು ಬಂದಾಗ ಭೂತಾಯಿ ಮೊದಲು.

ನವವಿಧ ಬಕ್ತಿಗಳಲ್ಲಿ ಅವರದು ಶ್ರದ್ಧಾಭಕ್ತಿ ಭಾವಕ್ಕೆ ಭಗವಂತ ಒಲಿಯುತ್ತಾನೆಂಬ ನಂಬಿಕೆ. ಕಷ್ಟ ಬಂದಾಗ ಭಗವಂತನಲ್ಲಿ ಮೊರೆಯಿಟ್ಟರೆ ಆತ ಪಾರು ಮಾಡುತ್ತಾನೆ. ಎಂಬ ನಂಬಿಕೆಯಿಂದ ಜೀವನ ಸಾಗಿಸುತ್ತದ್ದರು, ಆ ವಿಷಯವಾಗಿ ಅವರು ನುಡಿದ ಗೀತೆಯನ್ನು ನೊಡಿದಾಗ

ಮಾದೇವ ನಿನ ಹೊರತು ನಾನ್ಯಾರ ನಂಬಿಲ್ಲನಾ

ಮಾಡೇನೆಂಬ ಅಳವಿಲ್ಲ / ಮಲ್ಲಯ್ಯ

ನೀ ನಡೆಸುನ್ನ ಸರವೆಲ್ಲ

ಭಕ್ತಿಯಿಂದ ಕರೆದರೆ ಭಗವಂತ ಕೈ ಹಿಡಿದು ಎತ್ತುತ್ತಾನೆ. ಅವನೇ ಜಗದ ತಂದೆ, ಮಳೆ, ಗಾಳಿ, ಬೆಳೆ, ಬಿಸಿಲು ಎಲ್ಲವೂ ಅವನ ಸೃಷ್ಟಿ ಕ್ರಿಯೆಗಳೆಲ್ಲ ಅವನ ಲೀಲೆಗಳು, ಕಾಣುವ ವಸ್ತುಗಳೆಲ್ಲ ಅವನ ರೂಪಗಳು, ಅವನೇ ಸರ್ವಶಕ್ತನಾದ ಪರಮಾತ್ಮ, ಸೃಷ್ಟಿಯ ಸೂತ್ರಧಾರ, ಕಾಯುವವನು ಅವನೇ, ಕೊಲ್ಲುವವನು ಅವನೇ, ಎಂದು ತಿಳಿದು ಬದುಕನ್ನು ಸಾಗಿಸುತ್ತಿದ್ದರು.

**ಉಪಸಂಹಾರ**

ಒಟ್ಟಾರೆಯಾಗಿ ಜನಪದರು ತಮ್ಮ ಜೀವನ ಒಳ್ಳೆಯದಾಗಿರಲು, ಆದರ್ಶಮಯವಾಗಿರಲು ಎತ್ತರಕ್ಕೇರಿಸಲು ಕೆಲವೊಂದು ನಿಯಮಗಳನ್ನು ಪಾಲಿಸಿಕೊಂಡು ಬರುತ್ತಾರೆ. ಸಹಕಾರ ಭಾವದ ಸಮೂಹ ಬದುಕನ್ನು ಬದುಕುವ, ಪ್ರೀತಿಸುವ, ಅನಿವಾರ್ಯವೆಂದು ಭಾವಿಸುವ ಜನಪದರು ತಮ್ಮ ಜೀವನದ ಪ್ರಾಮುಖ್ಯತೆಯನ್ನು ಸಮೂಹದ ಬದುಕಿನಲ್ಲಿಯೇ ಕಾಣಬೇಕೆಂದು ಬಯಸಿದವರು ಹೀಗಾಗಿ ಎಲ್ಲರೂ ಒಟ್ಟಾಗಿ ಬದುಕಲು ಕೆಲ ನಿಯಮಗಳನ್ನು ತಿಳುವಳಿಕೆಯಿಂದ, ಕೆಲವು ನಂಬುಗೆಗಳನ್ನು ಮೌಖಿಕ ಒಪ್ಪಂದಗಳಿಂದ ಅನುಸರಿಸುತ್ತಾರೆ. ಇವು ಅವರ ಬದುಕಿಗೆ ಆದರ್ಶಗಳಾಗಿರುತ್ತವೆ. ಇವುಗಳನ್ನು ಅವರು ಶ್ರದ್ಧೆಯಿಂದ ಗೌರವಿಸುತ್ತಾರೆ. ಮತ್ತು ಬದುಕಿನಲ್ಲಿ ಪಾಲಿಸಿಕೊಂಡು ಬರುತ್ತಾರೆ. ಇಂತಹ ಸಮೂಹ ಬದುಕಿನ ನೀತಿ–ನಂಬುಗೆಗಳಾದ ಮೌಖಿಕ ಒಪ್ಪಂದಗಳನ್ನೇ ನಾವು ಜೀವನ ಮೌಲ್ಯಗಳು ಎಂದು ಕರೆಯುವುದು.

ಜನಪದರ ಜೀವನ ಮೌಲ್ಯಗಳೆಲ್ಲ ಇಂದು ಪ್ರಸ್ತುತವೆಂದು ಹೇಳುತ್ತ, ಜೀವನಮೌಲ್ಯಗಳ ಹಿಂದಿನ ಆಶಯಗಳನ್ನು ಗಮನಿಸಿ ಅವರ ಜೀವನ ಪ್ರೀತಿ, ಸ್ವಾಭಿಮಾನ, ಸತ್ಯನಿಷ್ಠೆ, ಶ್ರದ್ಧೇಯ ದುಡಿಮೆ, ಸಮಷ್ಠಿ ಪ್ರಜ್ಞೆ, ಸಹಕಾರ ಮನೋಭಾವ, ಸಹಿಷ್ಣುತೆ, ಸಹಬಾಳ್ವೆ, ಸಾಂಸ್ಕೃತಿಕ ಅರಿವು, ಬದುಕುವ ಕೌಶಲ ಮೊದಲಾದವು ಅನುಕರಣೀಯವಾಗಿವೆ. ಇವುಗಳೆಲ್ಲವನ್ನು ನಾವೇಲ್ಲರೂ ಬದುಕಲ್ಲಿ ಅಳವಡಿಸಿಕೊಂಡು ಜೀವನ ಸಾಗಿಸಿದರೆ ಮೌಲ್ಯಗಳಿಗೆ ಒಂದರ್ಥ ಬರುವುದರಲ್ಲಿ ಎರಡು ಮಾತಿಲ್ಲ ಎಂದು ತಿಳಿಯಬಹುದು.

**ಆಧಾರ ಗ್ರಂಥಗಳು/ ಗ್ರಂಥಋಣ**


1. ಹಾಲಿನ ತೆನೆ: ಸಂ. ಡಾ. ಎಲ್.ಆರ್. ಹೆಗಡೆ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, 1977

2. ಜನಪದ ಸಾಹಿತ್ಯ : ಡಾ. ವಿ. ಎಸ್. ಮಾಳಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು. 2022

3. ಕರ್ನಾಟಕ ಸಂಶೋಧನಾ ಜಾನಪದ : ಪ್ರೊ ಅಂಬಳಿಕೆ ಹಿರಿಯಣ್ಣ (ಸಂ) ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೋಟಗೊಡಿ, 2014

4. ಮೌಲ್ಯಶಿಕ್ಷಣ: ಎಸ್.ಕೆ. ಹೊಳೆಯಣ್ಣನವರ, ವಿದ್ಯಾನಿಧಿ, ಪ್ರಕಾಶನ ಗದಗ, 2006